**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ, ಇವರು ನಿಯಮ-72 ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ವಿಷಯ:**

ರಾಜ್ಯ ಸರ್ಕಾರ ಪ್ರತಿ ವರ್ಷ ವಿವಿಧ ಸಮಾಜಗಳ ಜಯಂತಿಗಳ ಆಚರಣೆಗೆ ಒದಗಿಸುತ್ತಿರುವ ಅನುದಾನದಲ್ಲಿ ತಾರತಮ್ಯವಾಗುತ್ತಿರುವುದನ್ನು ಸರಿಪಡಿಸುವ ಕುರಿತು ನಿಯಮ-72ರಡಿಯಲ್ಲಿ ಮಾನ್ಯ ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಿವಿಧ ಮಹಾಪುರುಷರ 32 ಜಯಂತಿಗಳನ್ನು ರಾಜ್ಯಮಟ್ಟ, ಜಿಲ್ಲಾಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಣೆ ಮಾಡುತ್ತಿದ್ದು, ಆ ಮೂಲಕ ಮಹಾಪುರುಷರ ತತ್ವ ಸಂದೇಶಗಳನ್ನು ಹಾಗೂ ಜೀವನ ಆದರ್ಶಗಳನ್ನು ಸಮಾಜಕ್ಕೆ ಪರಿಚಯಿಸುವ ಕೆಲಸ ಮಾಡಲಾಗುತ್ತಿದೆ.

ಅದರಂತೆ, ರಾಜ್ಯಮಟ್ಟದ ಪ್ರತಿ ಜಯಂತಿ ಕಾರ್ಯಕ್ರಮಕ್ಕೆ ರೂ.5.00ಲಕ್ಷ, ಜಿಲ್ಲಾಮಟ್ಟದ ಜಯಂತಿ ಆಚರಣೆಗೆ ರೂ.50,000 ಮತ್ತು ತಾಲ್ಲೂಕು ಮಟ್ಟದ ಜಯಂತಿ ಆಚರಣೆಗೆ ರೂ.20,000 ಗಳನ್ನು ನಿಗಧಿಪಡಿಸಿದೆ ಹಾಗೂ ಎಲ್ಲಾ ಜಯಂತಿಗಳ ಆಚರಣೆಗಳಿಗೂ ಒಂದೇ ತೆರನಾದ ಅನುದಾನವನ್ನು ನೀಡುತ್ತಿದ್ದು, ಇದರಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲ.

ಸಂಖ್ಯೆ: ಕಸಂವಾ 36 ಕವಿಸ 2023.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.